# ಮುದ್ರಣ ಯಂತ್ರ

ಶರಣ ಜೀವನ ನಡೆಸಿದ 20ನೇ ಶತಮಾನದ ಕಾರಣಿಕ ಪುರುಷ ವಚನ ಪಿತಾಮಹನೆಂದೇ ಖ್ಯಾತರಾದ ಡಾ. ಫ.ಗು. ಹಳಕಟ್ಟಿ ಅವರು ತಾವು ಸಂಗ್ರಹಿಸಿದ ರಾಶಿ–ರಾಶಿ ವಚನಗಳನ್ನು ಮುದ್ರಿಸಲು 1925ರಲ್ಲಿ ಕಟ್ಟಿಸಿದ ಮನೆಯನ್ನೇ ಮಾರಾಟ ಮಾಡಿ ಹಿತಚಿಂತಕ ಮುದ್ರಣಾಲಯ ಪ್ರಾರಂಭಿಸಿದರು. ಅವರು ಬಳಸಿದ ಮುದ್ರಣ ಯಂತ್ರವನ್ನು ಈಗ ವಿಜಯಪುರದ ಬಿ.ಎಲ್.ಡಿ.ಇ ಸಂಸ್ಥೆಯ ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರದಲ್ಲಿ ವೀಕ್ಷಣೆಗೆ ಇಡಲಾಗಿದೆ.

**ಚಿತ್ರ- ಬರಹ: ಗುರುರಾಜ ಬ.ಕನ್ನೂರ, ವಿಜಯಪುರ**





# ಪ್ರಾಣಿಗಳಲ್ಲಿ ಭಾವೈಕ್ಯತೆ

ಇತ್ತೀಚೆಗೆ ಸಂಕ್ರಾಂತಿಯ ನಂತರ ಮಂಡ್ಯದ ಪರಿಸರದಲ್ಲಿ ಮೂರು ದಿನ ಚಳಿ ಹೆಚ್ಚಾಗಿತ್ತು. ಕೀಲಾರ ಗ್ರಾಮದ ರಸ್ತೆಯ ಪಕ್ಕದಲ್ಲೇ ಹಸುವಿನ ಮೇಲೆ ಬೆಕ್ಕೊಂದು ಬಿಸಿಲು ಕಾಯಿಸುತ್ತ ಕುಳಿತಿರುವುದನ್ನು ನೋಡಿ ಆಶ್ಚರ್ಯವಾಯಿತು. ಈ ದಿನಗಳಲ್ಲಿ ಮನುಷ್ಯ ಮನುಷ್ಯರಲ್ಲಿ ಹೊಂದಾಣಿಕೆ ಇಲ್ಲವಾಗಿದೆ. ಜಾತಿ ಧರ್ಮದ ಹೆಸರಿನಲ್ಲಿ ಕಿತ್ತಾಡಿಕೊಂಡು ತಮ್ಮ ಮನುಷ್ಯತ್ವವನ್ನೇ ಕಳೆದುಕೊಳ್ಳುತ್ತಿದ್ದಾರೆ. ಒಂದೇ ಕುಟುಂಬದವರು ಕಿತ್ತಾಡಿಕೊಳ್ಳುವುದೂ ಉಂಟು. ಆದರೆ ಒಂದು ಹಸು, ಬೆಕ್ಕು ಬೇರೆ ಬೇರೆ ಪ್ರಾಣಿಗಳಾಗಿದ್ದರೂ ಅವೆರಡಕ್ಕೂ ಚಳಿಯಲ್ಲಿ ಬಿಸಿಲು ಕಾಯಿಸುವುದು ಬೇಕಾಗಿತ್ತು. ಬೇರೆ ಪ್ರಾಣಿಯಾಗಿದ್ದರೆ ಮತ್ತೊಂದು ಪ್ರಾಣಿಯನ್ನು ಅಂಟಿಸಿಕೊಳ್ಳುತ್ತಿರಲಿಲ್ಲ. ರೈತರ ಮನೆಯಲ್ಲಿ ಬದುಕುತ್ತಿರುವ ಇವು ಒಂದಕ್ಕೊಂದು ಸಹಕರಿಸಿಕೊಂಡು ಬದುಕುತ್ತಿರುವುದು ಈ ಚಿತ್ರ ನೋಡಿದರೆ ತಿಳಿಯುತ್ತದೆ.

**ಚಿತ್ರ- ಬರಹ: ಸಿ.ಸಿದ್ದರಾಜು ಆಲಕೆರೆ, ಮಂಡ್ಯ**

# ಬೀದಿ ಬೀದಿಗಳಲ್ಲೂ ರಂಗೋಲಿ

ಕುಂದಾಪುರದಲ್ಲಿ ಜ.22ರಂದು ಕುಂದ ರಂಗೋಲಿ ಉತ್ಸವ ಜರುಗಿತು. ವೆಂಕಟರಮಣ ಆಂಗ್ಲ ಮಾಧ್ಯಮ ಶಾಲೆ, ದತ್ತಾತ್ರೇಯ ದೇವಸ್ಥಾನದ ವಠಾರ, ಹಿಂದೂ ಶಾಲೆ, ಮುಖ್ಯರಸ್ತೆ, ರಥಬೀದಿ, ಮುನಿಸಿಪಲ್ ರಸ್ತೆ ಹಾಗೂ ಎಲ್ಲ ಒಳ ರಸ್ತೆಗಳಲ್ಲಿ ರಂಗೋಲಿ ಹುಡಿ, ತರಕಾರಿ, ಧಾನ್ಯ, ಹೂ, ಭತ್ತ, ದೀಪ, ಸಾಂಬಾರ ಜಿನಸು ಇತ್ಯಾದಿ ಬಳಸಿ ಬಿಡಿಸಿದ ಬಣ್ಣ ಬಣ್ಣದ ಸಾವಿರಾರು ರಂಗೋಲಿಗಳು ನೋಡುಗರನ್ನು ಮಂತ್ರಮುಗ್ಧರನ್ನಾಗಿಸಿದವು. ಬೋರ್ಡ್ ಹೈಸ್ಕೂಲ್‌ನ ಕಲಾಮಂದಿರದಲ್ಲಿ ಡಾ.ಭಾರತಿ ಮರವಂತೆಯವರು ಬಿಡಿಸಿದ ಈ ಬೃಹತ್ ರಂಗೋಲಿಯಂತೂ ಜನಮನ ಸೂರೆಗೊಂಡಿತು.

**-ಪಿ.ಜಯವಂತ ಪೈ, ಕುಂದಾಪುರ**

